**Publication : Sanjevani** **Date : Sunday, 20th Jan, 2013**
**Edition : Bangalore**

# ಮಾಹಿತಿ, ಜ್ಞಾನ ವಿನಿಮಯದಿಂದ

# ಸಮರ್ಥ ಆರ್ಥಿಕತೆ ಜಾರಿ

ಬೆಂಗಳೂರು, ಜ.20– ಸಮರ್ಥನೀಯ ಆರ್ಥಿಕತೆ ಜಾರಿಯಾಗಬೇಕಾದರೆ ಉದ್ದಿಮೆಗಳು ತಮ್ಮ ಆರ್ಥಿಕ, ಸಾಮಾಜಿಕ,ಪಾರಿಸಾರಿಕ ಮತ್ತು ಆಡಳಿತಾತ್ಮಕ ಮಾಹಿತಿ ಮತ್ತು ಜ್ಞಾನವನ್ನು ವಿನಿಮಯ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಸರಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಎನ್ ವಿದ್ಯಾಶಂಕರ್ ಹೇಳಿದರು.

ಎಫ್ ಐಸಿಸಿ ಸಮರ್ಥನೀಯ ಅಭಿವೃದ್ಧಿ ಸಮಿತಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಸಮರ್ಥನೀಯ ಅಭಿವೃದ್ಧಿ ದಾಖಲಿಸಲು ಹಣಕಾಸೇತರ ವರದಿಗಾರಿಕೆ ಅಗತ್ಯವಾದ ಪದ್ಧತಿಯಾಗಿದೆ. ದೀರ್ಘಕಾಲೀನವಾಗಿ ಭಾರತದಂತಹ ಆರ್ಥಿಕತೆಯ ಅಭಿವೃದ್ಧಿಗೆ ಇದು ಅಗತ್ಯ ಎಂದರು.

ಕಾರ್ಯಾಗಾರದಲ್ಲಿ ಉಪನ್ಯಾಸಕರು, ಉದ್ಯಮ ವಲಯದ ಹಿರಿಯ ತಜ್ಞರು, ಸ್ಯಾಬ್ ಮಿಲ್ಲರ್, ಬೇಯರ್ ಇಂಡಿಯಾ, ಇಂಟರ್‌ನ್ಯಾಶನಲ್ ತಜ್ಞರು ಸರಕಾರಿ ಮತ್ತು ವಿದೇಶಿ ತಜ್ಞರು ಭಾಗವಹಿಸಿದ್ದರು. ಅರ್ಧ ದಿನದ ಕಾರ್ಯಾಗಾರವನ್ನು ಎರಡಾಗಿ ವಿಭಜಿಸಲಾಗಿತ್ತು. ಸಮರ್ಥನೀಯ ವರದಿಗಾರಿಕೆ ಬಗ್ಗೆ ಅರ್ನೆಸ್ಟ್ ಆಂಡ್ ಯಂಗ್‌ನ ಹವಾಮಾನ ಬದಲಾವಣೆ ಮತ್ತು ಸಮರ್ಥನೀಯ ಸಮೂಹ, ಹಲವಾರು ಕೇಸ್ ಸ್ಟಡಿಗಳ ಅಧ್ಯಯನ ಬಗ್ಗೆ ಬೆಳಕು ಚೆಲ್ಲಲಾಯಿತು.

ಕಾರ್ಯಾಗಾರದ ಮುಖ್ಯ ಗುರಿ ಸಮರ್ಥನೀಯ ವರದಿಗಾರಿಕೆಯ ಸುತ್ತಮುತ್ತ ಮಾಹಿತಿ ವಿನಿಮಯವಾಗಿತ್ತು. ಸಾಮಾಜಿಕ, ಪಾರಿಸಾರಿಕ ಆರ್ಥಿಕ ಜವಾಬ್ದಾರಿಯಲ್ಲಿ ಉದ್ಯಮದ ಪಾತ್ರ, ಇತ್ತೀಚೆಗೆ ಕಾರ್ಪೊರೇಟ್ ವ್ಯವಹಾರ ಸಚಿವಾಲಯದ ಮಾರ್ಗದರ್ಶಿ ಸೂತ್ರಗಳು, ಪಾರಿಸಾರಿಕ, ಸಾಮಾಜಿಕ ಮತ್ತು ಆಡಳಿತಾತ್ಮಕ ವರದಿಗಾರಿಕೆಯನ್ನು ಕಡ್ಡಾಯಗೊಳಿಸಿರುವ ಸಂಸ್ಥೆಗಳ ಪಟ್ಟಿ, (ಇಎಸ್‌ಜಿ) ಅದರ ಮಹತ್ವದ ಬಗ್ಗೆ ಚರ್ಚಿಸಲಾಯಿತು.